**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**ಎಸ್ ಸಿ ಸಂಖ್ಯೆ– 202/2021**

**ಫಿರ್ಯಾದಿದಾರಃ–** **ಸರಕಾರದ ಪರವಾಗಿ ಬಿಳಿಕೆರೆ ಪೊಲೀಸ್ ಠಾಣೆ**

**ವಿರುದ್ಧ –**

**ಆಪಾದಿತರು:–** **1. ಆನಂದ ಬಿನ್ ಲೇಟ್ ರಾಮೇಗೌಡ,**

ವಯಸ್ಸು ಸುಮಾರು 48 ವರ್ಷಗಳು, ವ್ಯವಸಾಯ,

**2. ಕೀರ್ತಿ @ ಲೋಕೇಶ್ ಬಿನ್ ಆನಂದ.**

ವಯಸ್ಸು ಸುಮಾರು 19 ವರ್ಷಗಳು, ವಿದ್ಯಾರ್ಥಿ,

**3. ಬಸವೇಗೌಡ ಬಿನ್ ಲೇಟ್ ರಾಮೇಗೌಡ,**

ವಯಸ್ಸು ಸುಮಾರು 49 ವರ್ಷಗಳು, ವ್ಯವಸಾಯ.

**4. ಕುಮಾರ್ ಬಿನ್ ಬಸವೇಗೌಡ,**

ವಯಸ್ಸು ಸುಮಾರು 22 ವರ್ಷಗಳು, ವ್ಯವಸಾಯ,

**5. ರಾಜೇಶ್ ಬಿನ್ ಬಸವೇಗೌಡ,**

ವಯಸ್ಸು ಸುಮಾರು 20 ವರ್ಷಗಳು, ವಿದ್ಯಾರ್ಥಿ,

**ಎಲ್ಲರ ವಾಸಃ** ಸಣೇಗೌಡರ ಕಾಲೋನಿ ಗ್ರಾಮ,

ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ

**313 ಸಿ ಆರ್ ಪಿ ಸಿ ಅಡಿ ಆರೋಪಿಯ ವಿಚಾರಣೆ**

**ಪ್ರಶ್ನೆ–**1–ಈ ಕೇಸಿನಲ್ಲಿ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿದ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿದ್ದೀರಾ ?

**ಉತ್ತರ –**

**<u>ಪ್ರಶ್ನೆ:-</u>2-ಬಿರೇಶ (ಪ್ರಾಸಾ-1)** ಇವರು ತನ್ನ ಸಾಕ್ಷಿಯಲ್ಲಿ,ಈಗ್ಗೆ 3 ವರ್ಷಗಳ ಹಿಂದೆ ಒಂದು ದಿನ ನಮ್ಮುರಿನ ಮಾದೇಗೌಡರಿಗೆ ಸೇರಿದ ಜಮೀನಿನಲ್ಲಿ ಆರೋಪಿತರು ಹೊಗೆಸೂಪ್ಪಿನ ಸಸಿಗಳನ್ನು ನೆಡುವುದಕ್ಕೆ ಟ್ರೇ ಮಾಡಿ ಇಟ್ಟುಕೊಂಡಿದ್ದರು. ನಮ್ಮ ನಾಯಿ ಸದರಿ ಟ್ರೇ ಗಳನ್ನು ತುಳಿದ ಸಂಬಂಧವಾಗಿ 1 ನೇ ಆರೋಪಿ ಮತ್ತು ಚಾಸಾ-2 ರವರಿಗೆ ಗಲಾಟೆ ಆಗಿತ್ತು. ಅದಾದ 2-3 ದಿನಗಳ ನಂತರ ಬೆಳಗ್ಗೆ 5.00 ರಿಂದ 5.30 ಗಂಟೆ ಸಮಾರಿಗೆ ಚಾಸಾ-2 ಗದ್ದೆಗೆ ಹೋಗುವಾಗ ನಾನು ಮತ್ತು ಚಾಸಾ-3 ನಮ್ಮ ಮನೆಯ ಮುಂದೆ ನಿಂತಿದ್ದೆವು. ಆಗ ಆರೋಪಿತರು ನನ್ನ ತಮ್ಮನ ಜೊತೆ ಜಗಳ ಮಾಡಿ , 1 ನೇ ಆರೋಪಿ ಅವರ ಮನೆಯಿಂದ ಒಂದು ಮಚ್ಚನ್ನು ತೆಗೆದುಕೊಂಡು ಬಂದು , ಚಾಸಾ-2 ರವರಿಗೆ ತಲೆಗೆ ಹೊಡೆದ. ಉಳಿದ ಆರೋಪಿತರು ನನ್ನ ತಮ್ಮನನ್ನು ಹಿಡಿದುಕೊಂಡಿದ್ದರು. 1 ನೇ ಆರೋಪಿಯು ಅದೇ ಮಚ್ಚಿನಿಂದ ಚಾಸಾ-2 ರವರು ಹೊಟ್ಟೆಗೆ ಹೊಡೆದು ಕೊಲೆ ಮಾಡಲು ಪ್ರಯತ್ನಪಟ್ಟ .ಆಗ ಚಾಸಾ-2 ರವರು ಕಳೆಗೆ ಬಿದ್ದರು. ನಾನು ಮತ್ತು ಚಾಸಾ-3 ಜಗಳ ಬಿಡಿಸಿ, ನನ್ನ ತಮ್ಮನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ನನ್ನ ತಾಯಿ ಮತ್ತು ಇತರರು ಕರೆದುಕೊಂಡು ಹೋದರು. ನನ್ನ ತಮ್ಮನ ತಲೆಗೆ ಮತ್ತು ಸೊಂಟದ ಎಡಭಾಗಕ್ಕೆ ಗಾಯವಾಗಿತ್ತು. ನಾನು ನಮ್ಮ ಊರಿನ ಸುನೀಲ್ ನಿಂದ ಒಂದು ದೂರನ್ನು ಬರೆಸಿಕೊಂಡು, ಫಿರ್ಯಾದಿಯನ್ನು ನೀಡಿದ್ದೇನೆ. ನಾನು ಹೇಳಿದಂತೆ ದೂರನ್ನು ಬರೆದಿರುತ್ತಾರೆ. ನಾನು ದೂರು ನೀಡಿದ ನಂತರ ಮಧ್ಯಾಹ್ನ 2.00 ಗಂಟೆಗೆ ಪೋಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದಿದ್ದು , ಪಂಚನಾಮೆ ಮಾಡಿರುತ್ತಾರೆ. ನಾನೇ ಪೊಲೀಸರಿಗೆ ಸ್ಥಳ ತೋರಿಸಿರುತ್ತೇನೆ. ಪಂಚನಾಮೆ ಕಾಲಕ್ಕೆ ಪೊಲೀಸರು ನನ್ನ ತಮ್ಮನ ರಕ್ತಕಲೆಯಾದ ಟವೆಲ್, ರಕ್ತಸಿಕ್ತ ಮಣ್ಣು ಮತ್ತು ರಕ್ತರಹಿತ ಮಣ್ಣನ್ನು ಜಪ್ತಿ ಮಾಡಿದರು. ಸದರಿ ಪಂಚನಾಮೆಗೆ ಚಾಸಾ-8 ರವರು ಸಹ ಸಹಿ ಮಾಡಿರುತ್ತಾರೆ. ಸದರಿ ಪಂಚನಾಮೆ ಕಾಲಕ್ಕೆ ಪೊಲೀಸರು ಒಟ್ಟು 7 ಫೋಟೋಗಳನ್ನು ತೆಗೆದಿರುತ್ತಾರೆ. ಸದರಿ ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಸೀಲಾದ ಬಟ್ಟೆಯಿಂದ ಮಚ್ಚನ್ನು, ರಕ್ತಸಿಕ್ತ ಮಣ್ಣು ಮತ್ತು ರಕ್ತರಹಿತ ಮಣ್ಣನ್ನು ಹಾಗೂ ಟವೆಲ್ ಅನ್ನು ತೆಗೆದು ನೋಡಿ ಗುರುತಿಸುತ್ತೇನೆ ಅಂತ ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವು ಏನು ಹೇಳುವಿರಿ ?

**ಉತ್ತರಃ–**

**ಪ್ರಶ್ನೆಃ–3–ಜಯಣ್ಣ (ಪ್ರಾಸಾ–2)** ಇವರು ತನ್ನ ಸಾಕ್ಷಿಯಲ್ಲಿ, ದಿಃ 18–04–2020 ರಂದು ಬೆಳಗ್ಗೆ 6.00 ಗಂಟೆ ಸಮಾರಿಗೆ ನಾನು ಗದ್ದೆಗೆ ಹೋಗುವಾಗ, ಆರೋಪಿತರು ನನ್ನ ಜೊತೆ ಜಗಳ ಮಾಡಿ, 2 ರಿಂದ 5 ನೇ ಆರೋಪಿತರು ನನ್ನನ್ನು ಹಿಡಿದುಕೊಂಡಿದ್ದರು. 1 ನೇ ಆರೋಪಿ ಅವರ ಮನೆಯಿಂದ ಒಂದು ಮಚ್ಚನ್ನು ತೆಗೆದುಕೊಂಡು ಬಂದು, ನನ್ನ ತಲೆಗೆ ಹೊಡೆದ. 1 ನೇ ಆರೋಪಿಯು ಅದೇ ಮಚ್ಚಿನಿಂದ ನನ್ನ ಸೊಂಟಕ್ಕೆ ಹೊಡೆದು ಕೊಲೆ ಮಾಡಲು ಪ್ರಯತ್ನಪಟ್ಟ .ಆಗ ನಾನು ಕಳೆಗೆ ಬಿದ್ದರು. ಚಾಸಾ–1, 3 ಹಾಗೂ 4 ರವರು ಜಗಳ ಬಿಡಿಸಿ, ಚಾಸಾ–5 ರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ನನ್ನ ತಾಯಿ ಮತ್ತು ಇತರರು ಕರೆದುಕೊಂಡು ಹೋದರು. ನನ್ನ ತಲೆಗೆ ಮತ್ತು ಸೊಂಟದ ಎಡಭಾಗಕ್ಕೆ ಗಾಯವಾಗಿತ್ತು. ಆಗ ಚಾಸಾ–1 ರವರು ನಮ್ಮ ಊರಿನ ಸುನೀಲ್ ನಿಂದ ಒಂದು ದೂರನ್ನು ಬರೆಸಿಕೊಂಡು, ಫಿರ್ಯಾದಿಯನ್ನು ನೀಡಿರುತ್ತಾರೆ. ಮೈಸೂರಿನ ಕೆ ಆರ್ ಆಸ್ಪತ್ರೆಗೆ ನನ್ನ ತಾಯಿ ಮತ್ತು ಇತರರು ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ , ನಂತರ ಹುಣಸೂರು ಆಸ್ಪತ್ರೆಗೆ ಕರೆದುಕೊಂಡು ಹೋದರು. ಹುಣಸೂರು ಆಸ್ಪತ್ರೆಯಲ್ಲಿ ಒಂದು ವಾರದವರೆಗೆ ದಾಖಲಾಗಿದ್ದೆ . ಘಟನೆಗೆ 3 ದಿನಗಳ ಮುಂಚೆ ನಮ್ಮ ನಾಯಿ ಆರೋಪಿತರು ಸಸಿಗಳ ಟ್ರೇ ತುಳಿದಿದ್ದ ಕಾರಣ ಆರೋಪಿ ನಾಯಿಯ ಕಾಲು ಮುರಿದು ಹಾಕಿದ್ದ.ಅ ಸಂಬಂಧವಾಗಿ ಆರೋಪಿತರು ದ್ವೇಷ ಸಾಧಿಸಿ ನನಗೆ ಹಲ್ಲೆ ಮಾಡಿರುತ್ತಾರೆ. 1 ನೇ ಆರೋಪಿ ನನಗೆ ಹಲ್ಲೆ ಮಾಡಿದ ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ ಅಂತ ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವು ಏನು ಹೇಳುವಿರಿ ?

**ಉತ್ತರಃ–**

**ಪ್ರಶ್ನೆಃ–4–ಧನಪಾಲೇಗೌಡ (ಪ್ರಾಸಾ–3)** ಇವರು ತನ್ನ ಸಾಕ್ಷಿಯಲ್ಲಿ, ಈಗ್ಗೆ ನಾಲ್ಕುವರೆ ವರ್ಷಗಳ ಹಿಂದೆ ಒಂದು ನಾನು ಬೆಳಗ್ಗೆ 6.30 - 7.00 ಗಂಟೆ ಸುಮಾರಿಗೆ ನಾನು ನಮ್ಮ ಜಮೀನಿನಲ್ಲಿ ಕೆಲಸ ಮಾಡಲು ಆಳುಗಳನ್ನು ಕರೆಯಲು ಆರೋಪಿತರ ಮನೆ ಮುಂದೆ ಹೋಗುತ್ತಿದ್ದೇ. ಆಗ ಚಾಸಾ–2 ಗದ್ದೆ ಕಡೆ

ಹೋಗುತ್ತಿದ್ದ. ಆ ಸಮಯಕ್ಕೆ 1 ನೇ ಆರೋಪಿಯ ಮನೆಯ ಮುಂಭಾಗ ಎಲ್ಲ ಆರೋಪಿತರು ಚಾಸಾ–2 ರವರ ಮೇಲೆ ಗಲಾಟೆ ಮಾಡಿ , 2 ರಿಂದ 5 ನೇ ಆರೋಪಿತರು ಅಕ್ರಮವಾಗಿ ಗುಂಪುಕಟ್ಟಿಕೊಂಡು ಚಾಸಾ–2 ರವರನ್ನು ತಬ್ಬಿ ಹಿಡಿದುಕೊಂಡಿದ್ದರು. 1 ನೇ ಆರೋಪಿಯು ಮಚ್ಚಿನಿಂದ ಚಾಸಾ–2 ರವರು ತಲೆಗೆ , ಎಡಭಾಗದ ಸೊಂಟಕ್ಕೆ ಮಚ್ಚಿನಿದ ಹಲ್ಲೆ ಮಾಡಿ, ರಕ್ತ ಗಾಯ ಮಾಡಿದ. ಅದೇ ಸಮಯಕ್ಕೆ ಚಾಸಾ–1 ಮತ್ತು 3 ರವರು 1 ನೇ ಆರೋಪಿಯ ಮನೆಯ ಮುಂದೆ ನಿಂತಿದ್ದರು. ಆಗ ನಾನು , ಚಾಸಾ–1 ಮತ್ತು 3 ರವರು ಸೇರಿ ಜಗಳ ಬಿಡಿಸಿ, ಗಾಯಗೊಂಡಿದ್ದ ಚಾಸಾ–2 ರವರನ್ನು ಆಸ್ಪತ್ರೆಗೆ ಸೇರಿಸರುತ್ತೇವೆ. ನಂತರ ಆ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಅಂತ ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ–**

**ಪ್ರಶ್ನೆಃ–5–ಕುಮಾರೇಗೌಡ (ಪ್ರಾಸಾ–5) ,** ಇವರು ತನ್ನ ಸಾಕ್ಷಿಯಲ್ಲಿ, ಈಗ್ಗೆ 4–5 ವರ್ಷಗಳ ಹಿಂದೆ 1 ನೇ ಆರೋಪಿ ತನ್ನ ಮನೆ ಬಳಿ ಪೊಲಿಸೀರನ್ನು ಕರೆದುಕೊಂಡು ಬಂದು, 1 ನೇ ಆರೋಪಿ ತನ್ನ ಮನೆಯ ಒಳಗೆ ಹೋಗಿ ಕೃತ್ಯಕ್ಕೆ ಉಪಯೋಗಿಸಿದ ಒಂದು ಮಚ್ಚನ್ನು ತಂದು ಪೊಲೀಸರಿಗೆ ಹಾಜರು ಮಾಡಿದ. ಪೊಲೀಸರು ಆ ಬಗ್ಗೆ ಒಂದು ಪಂಚನಾಮೆ ಮಾಡಿ, ಪಂಚನಾಮೆಗೆ ನನ್ನ ಸಹಿ ಪಡೆದರು. ನನ್ನೊಂದಿಗೆ ಚಾಸಾ–10 ರವರು ಸ್ಥಳದಲ್ಲಿ ಇದ್ದು , ಪಂಚನಾಮೆಗೆ ಸಹಿ ಮಾಡಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ನಿಪಿ–11 ರಿಂದ 12 ರಂತೆ ಪೋಟೋಗಳನ್ನು ತೆಗೆದಿರುತ್ತಾರೆ. ನಿಪಿ–11 ಮತ್ತು 12 ರಲ್ಲಿ ಕಾಣುತ್ತಿರುವ ಮನೆ 1 ನೇ ಆರೋಪಿ ಮನೆ ಆಗಿರುತ್ತದೆ ಅಂತ ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವು ಏನು ಹೇಳುವಿರಿ ?

**ಉತ್ತರಃ–**

**ಪ್ರಶ್ನೆಃ–6–ಪುಟ್ಟೇಗೌಡ (ಪ್ರಾಸಾ–6),**ಇವರು ತನ್ನ ಸಾಕ್ಷಿಯಲ್ಲಿ,ಈಗ್ಗೆ ಸುಮಾರು 4 ವರ್ಷಗಳ ಹಿಂದೆ ಪೊಲೀಸರು 1 ನೇ ಆರೋಪಿಯ ಮನೆಯ ಬಳಿ ಬಂದು, ಪಂಚನಾಮೆ ಮಾಡಿ, 1 ನೇ ಆರೋಪಿಯು ಹಾಜರು ಮಾಡಿದ ಕೃತ್ಯಕ್ಕೆ ಬಳಸಿದ ಒಂದು ಮಚ್ಚನ್ನು ಜಪ್ತಿ ಮಾಡಿ, ನನ್ನ ಸಹಿ ಪಡೆದಿರುತ್ತಾರೆ. ಪಂಚನಾಮೆ ಕಾಲಕ್ಕೆ ಪೊಲೀಸರು ಸ್ಥಳದಲ್ಲಿ ಛಾಯಾಚಿತ್ರಗಳನ್ನು ತೆಗೆದಿದ್ದು , ಅದರಲ್ಲಿ ನಾನು ಇದ್ದೇನೆ. ಸದರಿ

ಫೋಟೋಗಳನ್ನು ಈಗಾಗಲೇ ನಿಪಿ–11 ಹಾಗೂ 12 ಎಂದು ಗುರುತಿಸಲಾಗಿದೆ ಅಂತ ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವು ಏನು ಹೇಳುವಿರಿ ?

**ಉತ್ತರಃ–**

**ಪ್ರಶ್ನೆಃ–7– ಡಾ. ಕೆ ಎಸ್ ವಾಣಿ (ಪ್ರಾಸಾ–7) ಹಿರಿಯ ತಜ್ಞ ವೈದ್ಯರು , ಸಾರ್ವಜನಿಕ ಆಸ್ಪತ್ರೆ ,ಹುಣಸೂರು,** ಇವರು ತನ್ನ ಸಾಕ್ಷಿಯಲ್ಲಿ, ನಾನು ದಿಃ 20–08–2010 ರಿಂದ ಇಲ್ಲಿಯವರೆಗೆ ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಹಿರಿಯ ತಜ್ಞ ವೈದ್ಯಾರಾಗಿ ಸೇವೆ ಸಲ್ಲಿಸುತ್ತಿದ್ದೇನೆ.ದಿಃ 18–04–2020 ರಂದು ಬೆಳಗ್ಗೆ 6.30 ಗಂಟೆ ಸುಮಾರಿಗೆ ನಾನು ಆಸ್ಪತ್ರೆ ಕರ್ತವ್ಯದಲ್ಲಿರುವಾಗ ಜಯಣ್ಣ ಎಂಬ ಗಾಯಾಳು ಹಲ್ಲೆ ಹಿನ್ನೆಲೆಗೆ ಒಳಗಾಗಿ ಚಿಕಿತ್ಸೆಗೆ ಬಂದಿದ್ದು , ಆತನನ್ನು ಪರೀಕ್ಷೆ ಮಾಡಿ ನೋಡಲಾಗಿ, ಆತನಿಗೆ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.

1. ಹಣೆಯ ಮಧ್ಯಭಾಗದಿಂದ ತಲೆಯ ಹಿಂಭಾಗದವರೆಗೆ ಸುಮಾರು 8 x 1 ಸೆಂ ಮೀ ಅಳತೆಯ ಒಂದು ಕತ್ತರಿಸಿದ ಗಾಯ

2. ಎಡಭಾಗದ ಹೊಟ್ಟೆಯ ಕೆಳಭಾಗದಲ್ಲಿ ಸುಮಾರು 1 x ½ ಸೆಂ ಮೀ ಅಳತೆಯ ಒಂದು ಹರಿದ ಗಾಯ

ಸದರಿ ಗಾಯಾಳುವಿಗೆ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಅಲ್ಲಿ ಗಾಯಾಳುವಿನ ತಲೆಯ ಸಿಟಿ ಸ್ಕ್ಯಾನ್ ಮತ್ತು ಎಕ್ಸರೇ ಮಾಡಿ, ಪುನಃ ನಮ್ಮ ಆಸ್ಪತ್ರೆಗೆ ಕಳುಹಿಸಿದ್ದು, ನಮ್ಮ ಆಸ್ಪತ್ರೆಯಲ್ಲಿ ಒಟ್ಟು 7 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ಆ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಒಂದನೇ ಗಾಯವು ತೀವ್ರ ಸ್ವರೂಪದ ಗಾಯವಾಗಿದ್ದು , ಎರಡನೇ ಗಾಯವು ಸಾದಾ ಸ್ವರೂಪದ ಗಾಯವಾಗಿರುತ್ತದೆ. ದಿಃ 25–08–2020 ರಂದು ಪೊಲೀಸರ ಕೋರಿಕೆಯ ಮೇರೆಗೆ ಒಂದು ಮಚ್ಚನ್ನು ಪರೀಕ್ಷೆ ಮಾಡಿ, ಮಚ್ಚಿನಿಂದ ಹೊಡೆದರೆ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಒಂದನೇ ಗಾಯವು ಆಗಬಹುದು ಎಂದು ಅಭಿಪ್ರಾಯ

ವರದಿ ನೀಡಿದ್ದೇನೆ. ಮು.ಮಾ–1 ಮಚ್ಚನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ ಅಂತ ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ–**

**ಪ್ರಶ್ನೆಃ–8– ಮಂಜುನಾಥ ಎನ್ ಕೆ (ಫ್ರಾಸಾ–8) ಫೋಟೋಗ್ರಾಫರ್, ಹುಣಸೂರು,** ಇವರು ತನ್ನ ಸಾಕ್ಷಿಯಲ್ಲಿ , ನಾನು ಕಳೆದ 25 ವರ್ಷಗಳಿಂದ ಕಾವೇರಿ ಡಿಜಿಟಲ್ ಫೋಟೋ ಸ್ಟುಡಿಯೋವನ್ನು ನಡೆಸುತ್ತಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ತೆಗೆದಿದ್ದ ಫೋಟೋಗಳನ್ನು ನನ್ನ ಸಮ್ಟುಡಿಯೋದಲ್ಲಿ ಪ್ರಿಂಟ್ ಹಾಕಿಸಿ ಕೊಟ್ಟಿದ್ದು ,ಆ ಬಗ್ಗೆ ಹಣ ಪಡೆದು ಪೊಲೀಸರಿಗೆ ರಸೀದಿ ಕೊಟ್ಟಿರುತ್ತೇನೆ ಅಂತ ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ–**

**ಪ್ರಶ್ನೆಃ–9– ಶಿವಪ್ರಕಾಶ ಎಸ್ (ಫ್ರಾಸಾ–9) ಆರಕ್ಷಕ ನಿರೀಕ್ಷಕ , ಕೆ ಆರ್ ನಗರ ಪೊಲೀಸ್ ಠಾಣೆ** ಇವರು ತನ್ನ ಸಾಕ್ಷಿಯಲ್ಲಿ , ನಾನು ಸೆಪ್ಟೆಂಬರ್ 2018 ರಿಂದ ಫೆಬ್ರವರಿ 2021 ರವರೆಗೆ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಸೇವೆ ಸಲ್ಲಿಸಿದ್ದೇನೆ. ದಿಃ 18–04–2020 ರಂದು ಮಧ್ಯಾಹ್ನ 12.00 ಗಂಟೆಗೆ ನಾನು ಠಾಣಾ ಕರ್ತವ್ಯದಲ್ಲಿರುವಾಗ ಚಾಸಾ–1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು, ನಮ್ಮ ಠಾಣಾ ಮೊ ಸಂ 111/2020 ರಂತೆ ಪ್ರಕರಣ ದಾಖಲು ಮಾಡಿಕೊಂಡು , ಪ್ರ ವ ವ ಯನ್ನು ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿರುತ್ತೇನೆ. ಅದೇ ದಿನ ಚಾಸಾ–7 ಮತ್ತು 8 ರವರ ಸಮಕ್ಷಮ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಚಾಸಾ–1 ಸ್ಥಳ ತೋರಿಸಿದ ಮೇರೆಗೆ ಮಧ್ಯಾಹ್ನ 1.15 ರಿಂದ 2.15 ರವರೆಗೆ ಕೃತ್ಯ ನಡೆದ ಸ್ಥಳದ ಪಂಚನಾಮೆ ಮಾಡಿ , ಸ್ಥಳದಲ್ಲಿ ರಕ್ತಸಿಕ್ತ ಮಣ್ಣು, ಸಾದಾ ಮಣ್ಣು , ಚಾಸಾ–1 ಹಾಜರು ಮಾಡಿದ ರಕ್ತಸಿಕ್ತ ಟವೆಲ್ ಗಳನ್ನು ಜಪ್ತಿ ಮಾಡಿರುತ್ತೇನೆ. ಪಂಚನಾಮೆ ಕಾಲಕ್ಕೆ ಜಪ್ತಿ ಮಾಡಿದ ರಕ್ತಸಿಕ್ತ ಮಣ್ಣು, ಸಾದಾ ಮಣ್ಣು , ಚಾಸಾ–1 ಹಾಜರು ಮಾಡಿದ ರಕ್ತಸಿಕ್ತ ಟವೆಲ್ ಗಳನ್ನು ಈಗಾಗಲೇ ಮು.ಮಾ–2 ರಿಂದ 4 ಎಂದು ಗುರುತಿಸಲಾಗಿದೆ.

ದಿಃ 19-04-2020 ರಂದು ಚಾಸಾ-3 ರಿಂದ 7 ರವರ ಹೇಳಿಕೆಗಳನ್ನು ಪಡೆದಿದ್ದೇನೆ. ಅದೇ ದಿನ ಸಂಜೆ 5.00 ಗಂಟೆಗೆ ಸಣ್ಣೇಗೌಡರ ಕಾಲೋನಿಯ 1 ನೇ ಆರೋಪಿಯ ಮನೆಯ ಮುಂದೆ 1 ನೇ ಆರೋಪಿಯನ್ನು ವಶಕ್ಕೆ ಪಡೆದು, ಠಾಣೆಗೆ ಕರೆದುಕೊಂಡು ಬಂದು, ಆತನನ್ನು ದಸ್ತಗಿರಿ ಮಾಡಿ , ಆತನ ಸ್ವಇಚ್ಛಾ ಹೇಳಿಕೆ ಪಡೆದಿರುತ್ತೇನೆ. ಆತನ ಸ್ವಇಚ್ಛಾ ಹೇಳಿಕೆಯಲ್ಲಿ ನೀಡಿದ ಮಾಹಿತಿ ಮೇರೆಗೆದಿಃ 20-04-2020 ರಂದು ಬೆಳಗ್ಗೆ 10.00 ಗಂಟೆಗೆ 1 ನೇ ಆರೋಪಿಯು ಆತನ ಮನೆಯ ಬಳಿ ಕರೆದುಕೊಂಡು ಹೋಗಿ , ಕೃತ್ಯಕ್ಕೆ ಬಳಸಿದ ಮಚ್ಚನ್ನು ಹಾಜರು ಮಾಡಿದ್ದು , ಚಾಸಾ-9 ಮತ್ತು 10 ರವರ ಸಮಕ್ಷಮ ಬೆಳಗ್ಗೆ 10.00 ರಿಂದ 11.00 ಗಂಟೆವರೆಗೆ ಪಂಚನಾಮೆ ಮಾಡಿ, ಸದರಿ ಮಚ್ಚನ್ನು ಜಪ್ತಿ ಮಾಡಿದ್ದೇನೆ. ನಂತರ 1 ನೇ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ದಿಃ 08-05-2020 ರಂದು 2 ರಿಂದ 5 ನೇ ಆರೋಪಿತರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು, ಅವರನ್ನು ವಿಚಾರಿಸಿ, ಬಿಡುಗಡೆ ಮಾಡಿದ್ದೇನೆ. ದಿಃ 10-05-2020 ರಂದು ಚಾಸಾ-2 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 15-05-2020 ರಂದು ಚಾಸಾ-15 ರವರ ಮೂಲಕ ವಶಪಡಿಸಿಕೊಂಡ ಮುದ್ದೆಮಾಲುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿರುತ್ತೇನೆ. ದಿಃ 28-05-2020 ರಂದು 1 ನೇ ಆರೋಪಿಯ ಮನೆಯ ಅಸೆಸ್ ಮೆಂಟ್ ಕಾಪಿಯನ್ನು ಪಡೆದು ಕಡತಕ್ಕೆ ಸೇರಿಸಿಕೊಂಡಿದ್ದೇನೆ. ದಿಃ 16-07-2020 ರಂದು ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಸೇರಿಸಿಕೊಂಡಿದ್ದೇನೆ. ದಿಃ 16-07-2020 ರಂದು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಪಡೆದು ಕಡತಕ್ಕೆ ಸೇರಿಸಿಕೊಂಡಿದ್ದೇನೆ. ದಿಃ 18-01-2021 ರಂದು ಮು.ಮಾ-1 ಮತ್ತು ಗಾಯದ ಪ್ರಮಾಣ ಪತ್ರವನ್ನು ವೈದ್ಯರ ಮುಂದೆ ಹಾಜರು ಮಾಡಿ , ಅಂತಿಮ ಅಭಿಪ್ರಾಯ ವರದಿ ಪಡೆದಿದ್ದೇನೆ. ದಿಃ 17-02-2021 ರಂದು ಕೃತ್ಯ ನಡೆದ ಸ್ಥಳದ ನಕಾಶೆಯನ್ನು ಪಿಡಬ್ಲ್ಯೂಡಿ ಇಲಾಖೆಯವರಿಂದ ಪಡೆದು ಕಡತಕ್ಕೆ ಸೇರಿಸಿಕೊಂಡಿದ್ದೇನೆ. ಕೃತ್ಯ ನಡೆದ ಸ್ಥಳದಲ್ಲಿ ಮಹಜರ್ ಸಮಯಕ್ಕೆ ಮತ್ತು ಮುದ್ದೆಮಾಲು 1 ಅನ್ನು ಅಮಾನತ್ತುಪಡಿಸಿಕೊಳ್ಳುವ ಸುವಯದಲ್ಲಿ ನಮ್ಮ ಸಿಬ್ಬಂದಿ ಚಾಸಾ-11 ಫೋಟೋ ತೆಗೆದಿದ್ದು, ಅವರಿಂದ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರ ಪಡೆದಿರುತ್ತೇನೆ. ನಂತರ ತನಿಖೆ

ಪೂರ್ಣಗೊಳಿಸಿ ಸಾಕಷ್ಟು ಸಾಕ್ಷಾದಾರಗಳು ಇದ್ದ ಕಾರಣ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಅಂತ ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವು ಏನು ಹೇಳುವಿರಿ ?

**ಉತ್ತರಃ–**

**ಪ್ರಶ್ನೆಃ–10–** ಈ ಕುರಿತು ನೀವು ಏನಾದರೂ ಹೇಳುವುದು ಇದೆಯಾ ?

**ಉತ್ತರಃ–**

**ಪ್ರಶ್ನೆಃ–11–** ನಿಮ್ಮ ಪರವಾಗಿ ಸಾಕ್ಷಿ ಪುರಾವೆ ಹಾಜರುಪಡಿಸುವಿರಾ ?

**ಉತ್ತರಃ–**

(**ಆರೋಪಿತರ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು ಆರೋಪಿತರು ಕೊಟ್ಟ ಉತ್ತರವನ್ನು ಹಾಗೆಯೇ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.**)

**(ಟಿ.ಗೋವಿಂದಯ್ಯ)**
8 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.